ಶ್ರೀ ಪಿ. ಜಿ. ಆರ್. ಸಿಂಧ್ಯ :– ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಸಚಿವರು 'ಏಕೆ ಈ ರೀತಿ ಹೇಳುತ್ತಿದ್ದಾರೋ ಗೊತ್ತಿಲ್ಲ. ಸೋಷಿಯಲ್ ಡಿಪಾರ್ಟ್‌ಮೆಂಟಿಗೆ ಇದು ಸೇರಿದರೂ ಕೂಡಾ ಒ. ಎ ಪಿ. ಯನ್ನು ಸ್ಯಾಂಕ್ಷನ್ ಮಾಡುವುದು ತಹಶೀಲ್ದಾರ್, ಎ. ಸಿ. ಮತ್ತು ಡಿ. ಸಿ. ಯವರು. ಇವರುಗಳೆಲ್ಲಾ ನಿಮ್ಮ ಇಲಾಖೆಗೆ ಸೇರುತ್ತಾರೆ. ಅದನ್ನು ಡಿಸ್ಪೋಸ್ ಮಾಡುವುದೂ ರೇವಿನ್ಯೂ ಇಲಾಖೆಯವರೇ.

So, the question of discussion with the Social welfare Department does not arise at all.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ಇವುಗಳನ್ನೆಲ್ಲಾ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನ ಮೂಲಕ ಕೊಡಲಾಗುತ್ತದೆ ಇವುಗಳನು ಸ್ಯಾಂಕ್ಷನ್ ಮಾಡುವುದು ತಹಶೀಲ್ದಾರ್‌ರವರೇ. ಯಾವುದೇ ಇಲಾಖೆಯ ಕೆಲಸ ಆಗಬೇಕಾದರೂ ಮೊದಲು ತಹಶೀಲ್ದಾರ್‌ರವರಿಗೆ ಒಪ್ಪಿಸಿ ಅನ್ನುತ್ತಾರೆ. ಸೋಷಿಯಲ್ ಡಿಪಾರ್ಟ್‌ಮೆಂಟಿನ ಕೆಲಸ ಇರಲಿ ಹೆಚ್. ಯು. ಡಿ. ಇಲಾಖೆಯಿಂದ ಹೌಸ್ ಸೈಟ್‌ಗಳನ್ನು ಕೊಡುವುದಿರಲಿ ಕೊನೆಗೆ ಇಂಪ್ಲಿಮೆಂಟ್ ಮಾಡುವುದು ತಹಶೀಲ್ದಾರ್‌ರವರೇ. ಅದಕ್ಕೆ ನಾನು ಹೇಳುತ್ತೇನೆ; ಈ ವೃದ್ಧಾಪ್ಯ ವೇತನ ಸರಿಯಾಗಿ ಕೊಡಿಸುವುದರ ಬಗ್ಗೆ ನನಗೂ ಇಂಟರೆಸ್ಟ್ ಇದೆ. ಮಾನ್ಯ ಸದಸ್ಯರುಗಳು ಹೇಳಿದ ಹಾಗೆ ಓಲ್ಡ್ ಏಜ್ ಪೆನ್‌ಷನ್, ವಿಡೋ ಪೆನ್‌ಷನ್, ತೋಟೆ ತಳವಾರರಿಗೆ ಕೊಡತಕ್ಕಂಥ ಪೆನ್‌ಷನ್ ಸಹ ಎರಡು, ಮೂರು, ಐದು ತಿಂಗಳುಗಳಾದರೂ ಅವರ ಕೈ ಸೇರುವುದಿಲ್ಲ ಅದಕ್ಕೆ ನಾನು ಇದರ ಬಗ್ಗೆ ಸಂಪೂರ್ಣವಾದಂಥ ಒಂದು ತನಿಖೆ ಮಾಡಿಸಿ ಯಾವ ರೀತಿಯಾಗಿ ಪರಿಹಾರ ಕೊಡಬೇಕು ಅನ್ನತಕ್ಕಂಥಾದ್ದನ್ನು ಯೋಜನೆ ಮಾಡಿ ಸೂಕ್ತ ಕ್ರಮ ತೆಗೆದು ಕೊಳ್ಳುತ್ತೇನೆ.

Mr. Speaker : Mr. Patil, with regard to your question No. 1031, Tomorrow there is a short duration discussion on this very subject. So you can take that opportunity and bring whatever you want to the notice of the Government.

ವಿಷಯ :– ಚನ್ನಪಟ್ಟಣದಲ್ಲಿ ಕ. ರಾ. ರ. ಸಾ. ಸಂಸ್ಥೆ ಬಸ್ಸು ನಿಲ್ದಾಣದ ನಿರ್ಮಾಣ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೨೬೮ (೧೧೩೭)

ಶ್ರೀ ಸದತ್ ಅಲಿ ಖಾನ್ (ಚನ್ನಪಟ್ಟಣ) :– ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚನ್ನಪಟ್ಟಣದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಹೊಸ ಬಸ್ ನಿಲ್ದಾಣ ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ?

ಆ) ಹಾಗಿದ್ದಲ್ಲಿ ಯಾವಾಗ ಕಟ್ಟಡದ ಕಾರ್ಯ ಪ್ರಾರಂಭಿಸಲಾಗುವುದು ಮತ್ತು ಯಾವಾಗ ಮುಗಿಯುವುದು.

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು) :–

ಅ) ಹೌದು.

ಆ) ಈ ಉದ್ದೇಶಕ್ಕೆ ನಿವೇಶನವನ್ನು ಸ್ವಾಧೀನಪಡಿಸಿಕೊಂಡ ಕೂಡಲೇ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲಾಗುವುದು.

Shri. Sadat Ali Khan : Right from Bangalore, up to Mysore, all the towns have got KSRTC bus stations except Channapatna The present bus station is located at a Municipal building and it is not suitable for a modern KSRTC bus station. The only alternative is to acquire the Travellers Bunglow and the adjoining site belonging to the Education Department and private lands including Government Urdu schools by payingcompensation, I request the Hon. Minister to take up the construction at least within this current year.

Shri. Aziz Sait : The present bus stand at Channapatna is a very small place which belongs to the Town Municipality. The KSRTC has been approaching the Municipality. They are demanding Rs. 24 lakhs for 8 guntas of land. There is a Government land for bus stand. I assure the Hon. Member that I will have an inspection after the assembly session alongwith the concerned Officers and try to take that land. That will make a good bus stand.

ಶ್ರೀ ಪಿ. ಜಿ. ಆರ್. ಸಿಂಧ್ಯ :– ಮಾನ್ಯ ಅಧ್ಯಕ್ಷರೇ, ಚೆನ್ನಪಟ್ಟಣದ ಬಸ್ ಸ್ಟ್ಯಾಂಡ್ ವಿಚಾರದಲ್ಲಿ ಮಾನ್ಯ ಸಾರಿಗೆ ಸಚಿವರಲ್ಲಿ ನಾನು ಒಂದು ವಿಚಾರವನ್ನು ಕೇಳಿಕೊಳ್ಳುವುದೇನೆಂದರೆ, ಈಗಿರತಕ್ಕ ಬಸ್ ಸ್ಟ್ಯಾಂಡ್ ವ್ಯವಸ್ಥೆ ಸರಿಯಿಲ್ಲ. ಅಲ್ಲಿ ಹೊಸದಾಗಿ ಒಂದು ಬಸ್ ಸ್ಟ್ಯಾಂಡ್‌ನ್ನು ಕಟ್ಟಿಸಬೇಕಾದ ಅವಶ್ಯಕತೆ ಬಹಳ ಇದೆ. ಅಲ್ಲಿ ಯಾವಾಗಲೂ ಆಕ್ಸಿಡೆಂಟ್ ಆಗುತ್ತಿರುತ್ತವೆ. ಕೆ. ಎಸ್. ಆರ್. ಟಿ. ಸಿ. ಯಲ್ಲಿ ಹಣ ಇದ್ದರೂ ಕೂಡ ಸುಮಾರು ೫–೬ ವರ್ಷಗಳಿಂದ ಈ ಕೆಲಸವನ್ನು ಮಾಡಲಿಕ್ಕೆ ಆಗುತ್ತಿಲ್ಲ. ಈಗ ಮುನಿಸಿಪಾಲಿಟಿಯವರು ೨೪ ಲಕ್ಷ ರೂ. ಗಳನ್ನು ಕೇಳುತ್ತಿದ್ದಾರೆ.

ಇದಕ್ಕೆ ಅನೇಕ ಕಂಡೀಷನ್ಸ್‌ನ್ನು ಹಾಕುತ್ತಿದ್ದಾರೆ. ಇದು ಆಗದೇ ಇರತಕ್ಕ ಕೆಲಸ. ಈಗಂತೂ ಚನ್ನಪಟ್ಟಣ ಬಹಳ ದೊಡ್ಡದಾಗಿ ಬೆಳೆಯುತ್ತಿದೆ. ಊರಿನ ಹೊರಗಡೆ ಒಂದು ಕೆರೆ ಇದೆ. ಇದು ಜಿಲ್ಲಾ ಪರಿಷತ್ತಿನ ವಶದಲ್ಲಿದೆ. ಇದನ್ನು ಸರ್ಕಾರ ತೆಗೆದುಕೊಳ್ಳಬೇಕು. ಚನ್ನಪಟ್ಟಣದಲ್ಲಿ ಒಂದು ಬಸ್ ಸ್ಟ್ಯಾಂಡ್ ಮತ್ತು ಒಂದು ಬಸ್ ಡಿಪೋ ಎರಡು ಕೂಡ ಅವಶ್ಯಕತೆ ಇರುವುದರಿಂದ ಇವೆರಡನ್ನೂ ನೂಡಲಿಕ್ಕೆ ಸಾಧ್ಯವೇ?

ಶ್ರೀ ಅಜೀಜ್ ಸೇಠ್ :– ಬೆಂಗಳೂರಿನಿಂದ ಮೈಸೂರಿಗೆ ಹೋಗುವಾಗ ಚನ್ನಪಟ್ಟಣದ ಹತ್ತಿರ ನೋಡಿದರೆ ಅಲ್ಲಿ ಒಂದು ಕೆರೆ ಇದೆ. ಆದರೆ ಆದರಲ್ಲಿ ನೀರು ಇದೆ. ರೈಟ್ ಸೈಡ್‌ನಲ್ಲಿರತಕ್ಕ ಜಮೀನನ್ನು ರೆಗ್ಯುಲೇಟೆಡ್ ಮಾರ್ಕೆಟ್‌ನವರು ತೆಗೆದುಕೊಂಡಿದ್ದಾರೆ. ನಾನು ಮೈಸೂರು–ಬೆಂಗಳೂರಿಗೆ ಓಡಾಡುವಾಗ ನೋಡುತ್ತಲೇ ಇದ್ದೇನೆ. ಮಾನ್ಯ ಸದಸ್ಯರಿಗಿಂತಲೂ ಹೆಚ್ಚಿನ ಮಾಹಿತಿ ಇದರ ಬಗ್ಗೆ ನನಗಿದೆ. ಅಲ್ಲಿ ಒಂದು ಬಸ್ ಸ್ಟ್ಯಾಂಡ್ ಮತ್ತು ಒಂದು ಬಸ್ ಡಿಪೋ ಎರಡೂ ಕೂಡ ಬೇಕಾಗಿದೆ. ಇದರ ಬಗ್ಗೆ ನಾನು ಪರ್ಸನಲ್ ಆಗಿ ಇನ್‌ಸ್ಪೆಕ್ಷನ್ ಮಾಡಿ ಈ ವಿಚಾರವನ್ನು ಬಗೆಹರಿಸುತ್ತೇನೆ.

ಅಧ್ಯಕ್ಷರು :– ಈ ಬಸ್ ಸ್ಟ್ಯಾಂಡ್ ಸ್ಟೇಟ್ ಹೈವೇಗೆ ಬಹಳ ತೊಂದರೆ ಮಾಡುತ್ತಿದೆ.

Sri Aziz Sait :– Yes, Sir. The difficulty is to the Eastern side.....

Mr. Speaker :– Any way you are going to inspect the land.

Sri Aziz Sait :– I will have an inspection. I will do it by action.

ವಿಷಯ : ಶಿವಮೊಗ್ಗದಲ್ಲಿರುವ ಕ.ರಾ.ರ.ಸಾ. ಸಂಸ್ಥೆ ಬಸ್ಸು ನಿಲ್ದಾಣ ಚುಕ್ಕೆ ಗುರ್ತಿನ ಪ್ರಶ್ನೆ ಸಂಖ್ಯೆ ೨೬೯ (೧೧೭೧)

ಶ್ರೀ ಕೆ. ಎಸ್. ಈಶ್ವರಪ್ಪ (ಶಿವಮೊಗ್ಗ) :– ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) ಶಿವಮೊಗ್ಗದ ಬಸ್ ನಿಲ್ದಾಣದ ಕಾರ್ಯ ನಿಂತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಬ) ಹಾಗಿದ್ದಲ್ಲಿ ಅದಕ್ಕೆ ಕಾರಣ ಏನು ?

ಕ) ಅದನ್ನು ಯಾವಾಗ ಶುರುಮಾಡಿ ಪೂರ್ಣಗೊಳಿಸಲಾಗುವದು ?